https://www.kuvempuonline.com

**QP CODE 10101 A**



## ಮೊದಲನೆ ಸೆಮಿಸ್ಟರ್ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಎಸ್.ಡಬ್ಲ್ಯೂ/ ಬಿ.ಎಸ್ಸಿ (ಹೋಮ್ ಸೈನ್ಸ್) ಪದವಿ ಪರೀಕ್ಷೆ

**ಏಪ್ರಿಲ್/ಮೇ 2019**

*(2018 – 19 ರಿಂದ 2020 – 21ನೇ ಸಾಲಿನ ವಿದ್ಯಾರ್ಥಿಗಳಿಗೆ) (ಹೊಸಬರಿಗೆ)*

**ಕನ್ನಡ ಭಾಷಾ ಪತ್ರಿಕೆ – ೧**

**SAA/SSA/SCA/SWA/SHA – 010: ಭಾಷಾ ಬೆಡಗು – ೧**

*ಸಮಯ: 3 ಘಂಟೆಗಳು]* *[ಗರಿಷ್ಠ ಅಂಕಗಳು: 80*

**1.** *ಅ. ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ:* 1 x 7 = 07

೧. ಮಿಡಿದೊಡೆ ತನಿಗರ್ವು ರಸಂ
ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ
ಗಿಡುವುವು ತುಂಬಿಗಳಟ್ಟಮ
ವಡುವುವು ಕುಡಿದೊಂದು ಪಣ್ಣ ರಸದೊಳೆ ಗಿಳಿಗಳ್

೨. ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವ
ಏರಿಲ್ಲದ ಗಾಯದಲಿ ನೊಂದೆನವ್ವ
ಸುಖವಿಲ್ಲದ ಧಾವತಿಗೊಂಡೆನವ್ವ
ಚನ್ನಮಲ್ಲಿಕಾರ್ಜುನಂಗೊಲಿದು ಬಾರದ ಭವಂಗಳಲ್ಲಿ ಬಂದೆನವ್ವ

*ಆ. ಹತ್ತು ಪದಗಳಿಗೆ ಅರ್ಥ ಬರೆಯಿರಿ:* 10 x ½ = 05

ಲಳಿತ, ಅಲರು, ಫಣಿ, ರೂಹು, ತೃಷೆ, ಹೆರಳು, ಅನಲ, ಬಿಸುಸುಯ್, ಸ್ಮರ, ಬಾಂದಳ, ಬಾಂದೊರೆ, ತುರುಕಾರ, ದೇಸಿಗ, ರಾಧೇಯ, ಕುರುಬು

*ಇ. ಯಾವುದಾದರೂ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ:* 2 x 3 = 06

ಅ) ಸೀತೆಯ ದಂಡೆ ಆ) ಕೆಳಬೈಲಿನ ಗೋಪಾಲಯ್ಯ ಇ) ರೂಪ ಹಾಸನ ಈ) ಕಿನ್ನಿ

**2.** *ಅ. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ:* 1 x 8 = 08

1. 'ಶಾರದ ಯಾಮಿನಿ' ಕವಿತೆಯಲ್ಲಿ ಚಂದ್ರನ ವರ್ಣನೆ ಮೂಡಿ ಬಂದಿರುವ ಬಗೆಯನ್ನು ವಿವರಿಸಿ
2. 'ಮೇದರ ಹಳ್ಳಿಯ ಅವಸಾನ' ಪಠ್ಯದಲ್ಲಿ ವ್ಯಕ್ತವಾದ ಪ್ರಸ್ತುತ ಸಮಾಜದ ಸ್ಥಿತ್ಯಂತರಗಳನ್ನು ವಿಮರ್ಶಿಸಿ.

*ಆ. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ:* 1 x 8 = 08

1. 'ನಿಸ್ಸೀಮ ಚಲುವಂಗೆ ನಾನೊಲಿದೆ' ವಚನ ಭಾಗದ ಅಕ್ಕಮಹಾದೇವಿಯ ಒಲುಮೆಯ ಉತ್ಕಟತೆಯನ್ನು ವಿವರಿಸಿ.
2. 'ನೆಳಲು ತನುವಿನ ಬಳಿಯೊಳೊಲ್ಲದೆ ಚಲಿಸುವುದೆ' ಕಾವ್ಯಭಾಗದಲ್ಲಿ ಸತಿಪತಿಯರ ಪರಸ್ಪರ ದಾಂಪತ್ಯ ನಿಷ್ಠೆ, ಒಲವು ಹೇಗೆ ನಿರೂಪಿತವಾಗಿದೆ? ವಿವರಿಸಿ.

*ಮುಂದುವರೆದಿದೆ.............2*

https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



**3. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ:** 3 x 5 = 15

1. 'ಶ್ರಾವಣ' ಕವಿತೆಯಲ್ಲಿ ಚಿತ್ರಿತವಾದ ನಿಸರ್ಗದ ರಮಣೀಯತೆಯನ್ನು ವಿವರಿಸಿ.
2. ಮಡಿಕೇರಿಯಲ್ಲಿ ಬೀಳುವ ಮಂಜಿನ ಸೊಗಸಾದ ವರ್ಣನೆಯನ್ನು ವಿವರಿಸಿ.
3. 'ನಿನ್ನ ಮರೆಯೂ ಮಾತು' ಕವನದ ಒಲುಮೆಯ ಹಿರಿಮೆಯನ್ನು ವಿವರಿಸಿ.
4. 'ಬೆಟ್ಟದ ಜೀವ' ಕಾದಂಬರಿಯ ಆಯ್ದುಭಾಗದಲ್ಲಿ ನಿರೂಪಿತವಾದ ಪ್ರಕೃತಿದತ್ತ ಜೀವನ ಶೈಲಿಯ ಮಹತ್ವವನ್ನು ಚರ್ಚಿಸಿ.
5. 'ಅಗಲಿ ಇರಲಾರೆನೊ ನಿನ್ನನ್ನಾ' ಕವನದ ಆಶಯವನ್ನು ಚರ್ಚಿಸಿ.

**4. ಯಾವುದಾದರೂ ಐದಕ್ಕೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** 5 x 3 = 15

1. ಕುರುಕ್ಷೇತ್ರಮೀ ದಿನಂ ಮೂಗುವಟ್ಟಿರ್ಪ ಸುಡುಗಾಡಿನಂತಿರ್ಪುದು?
2. ಪೂರ್ವಯುಗಗಳ ನರರಿಗಿಂತಲುಂ ಉನ್ನತರ್
3. ಸಮರರಂಗಂ ಇನಿತು ಭಯಂಕರಮೆಂದು ನಾನರಿದುದಿಲ್ಲ
4. ಆರ್ಗೆ ನೀನೇನಾದರೇನ್? ನಲ್ಲುವರನೆನಗೆ ನೀನ್!
5. ಮನುಜನ್ ನರಳುತಿರೆ ಮನುಜನ್ ಸಂತವಿಸೆ ಮನುಜನ್ ದೇವನ್ ತಾನಾದಪನ್
6. ಧರ್ಮದ ಮುಸುಂಗಂ ತೊಟ್ಟು ಕೈತವಂ ತೋರಿದಿರಿ!
7. ಎನ್ನ ಕೌಮಾರ ಪ್ರಣಯದಿಂದೊಗೆತಂದ ಎನ್ನ ಕಣ್ಮಣಿ ಕರ್ಣನ್!

**. ಎರಡು ಪ್ರಶ್ನೆಗಳಿಗೆ ಉತ್ತರಿಸಿ:** 2 x 8 = 1

1. 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿನ ದ್ವಾಪರ ಹಾಗೂ ಕಲಿಯ ಸಂಭಾಷಣೆಯ ವೈಶಿಷ್ಟ್ಯತೆಯನ್ನು ವಿಮರ್ಶಿಸಿ.
2. 'ಶ್ಮಶಾನ ಕುರುಕ್ಷೇತ್ರಂ' ನಾಟಕದ ಹಿನ್ನೆಲೆಯಲ್ಲಿ ಮಹಾಯುದ್ಧಗಳ ಪರಿಣಾಮವನ್ನು ಚರ್ಚಿಸಿ.
3. 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಮುದುಕಿ ಹಾಗೂ ಮಾತೆಯ ನಡುವಿನ ಸಂಭಾಷಣೆಯ ಮಹತ್ವವನ್ನು ವಿವರಿಸಿ.

* * * * * * *

https://www.kuvempuonline.com
https://www.kuvempuonline.com
https://www.kuvempuonline.com
https://www.kuvempuonline.com